ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 840
2. ಮಾನ್ಯ ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್
3. ಉತ್ತರಿಸಬೇಕಾದ ದಿನಾಂಕ : 20.09.2022
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲ್ಯಾಣ ಕರ್ನಾಟಕ ಭಾಗದಲ್ಲಿ ಬರುವ ಸರ್ಕಾರಿ ಹಾಗೂ ಅರೆ ಸರ್ಕಾರಿ ಸಕ್ಕರೆ ಕಾರ್ಖಾನೆಗಳೆಷ್ಟು? ಕಳೆದ ವರ್ಷ ಯಾವ ಯಾವ ಕಾರ್ಖಾನೆಗಳಲ್ಲಿ ಎಷ್ಟು ಟನ್ ಕ್ರಶಿಂಗ್ (Crushing) ಮಾಡಲಾಗಿದೆ ಹಾಗೂ ಉತ್ಪಾದನೆಯಾದ ಸಕ್ಕರೆ ಪ್ರಮಾಣ ಎಷ್ಟು (ಸಂಪೂರ್ಣ ಮಾಹಿತಿ ನೀಡುವುದು) | ಕಲ್ಯಾಣ ಕರ್ನಾಟಕ ಭಾಗದಲ್ಲಿ ಸರ್ಕಾರಿ ವಲಯದ ಯಾವುದೇ ಸಕ್ಕರೆ ಕಾರ್ಖಾನೆಗಳು ಇರುವುದಿಲ್ಲ. ಈ ಭಾಗದಲ್ಲಿ ಸಹಕಾರಿ ವಲಯದ 03, ಖಾಸಗಿ ವಲಯದ 10 ಸಕ್ಕರೆ ಕಾರ್ಖಾನೆಗಳು ಇರುತ್ತವೆ. 2021-22ನೇ ಹಂಗಾಮಿನಲ್ಲಿ ಈ 13 ಸಕ್ಕರೆ ಕಾರ್ಖಾನೆಗಳು ನುರಿಸಿರುವ ಕಬ್ಬಿನ ಪ್ರಮಾಣ ಮತ್ತು ಉತ್ಪಾದಿಸಿದ ಸಕ್ಕರೆ ಪ್ರಮಾಣದ ವಿವರ ಈ ಕೆಳಕಂಡಂತಿದೆ. |

(ಮೆ. ಟನ್‌ಗಳಲ್ಲಿ)

| ಜಿಲ್ಲೆಯ ಹೆಸರು | ಕಾರ್ಖಾನೆಯ ಹೆಸರು | ನುರಿಸಿದ ಕಬ್ಬಿನ ಪ್ರಮಾಣ | ಉತ್ಪಾದಿಸಿದ ಸಕ್ಕರೆ |
|---|---|---|---|
| | ಸಹಕಾರಿ ವಲಯ | | |
| ಬೀದರ್ | ಮಹಾತ್ಮಾ ಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಭಾಲ್ಕಿ | 5,78,378 | 54,625 |
| | ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಇಮಾಂಪುರ, | 4,00,791 | 37,904 |
| | ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಳ್ಳಿಖೇಡ್. | 54,574 | 2,286 |
| | ಖಾಸಗಿ ವಲಯ | | |
| | ಶ್ರೀ ಭವಾನಿ ಶುಗರ್ಸ್, ಬರೂರು | 56,990 | 5,164 |
| | ಭಾಲ್ಕೇಶ್ವರ ಶುಗರ್ಸ್ ಲಿ., ಬಾಜೋಳಗ, ಭಾಲ್ಕಿ ತಾಲ್ಲೂಕು. | 5,86,094 | 31,424 |
| | ಬೀದರ್ ಕಿಸಾನ್ ಶಕ್ಕರ್ ಕಾರ್ಖಾನಾ, ಮೊಗದಾಳ್ | 4,19,923 | 39,859 |
| | **ಒಟ್ಟು(1)** | **20,96,750** | **1,71,262** |
| ವಿಜಯನಗರ | ಮೈಲಾರ ಶುಗರ್ಸ್ ಲಿ., ಬೀರಬ್ಬಿ, ಹೂವಿನಹಡಗಲಿ ತಾಲ್ಲೂಕು. | 5,10,934 | 39,460 |
| | ಶಾಮನೂರು ಶುಗರ್ಸ್ ಲಿ., ದುಗ್ಗಾವತಿ, ಹರಪನಹಳ್ಳಿ ತಾಲ್ಲೂಕು | 4,26,984 | 28,222 |
| ಬಳ್ಳಾರಿ | ಎನ್‌ಎಸ್‌ಎಲ್ ಶುಗರ್ಸ್ ಲಿ., (ತುಂಗಭದ್ರ), ದೇಶನೂರು | 3,16,404 | 31,265 |
| | **ಒಟ್ಟು(2)** | **12,54,322** | **98,947** |
| ಕಲಬುರಗಿ | ರೇಣುಕಾ ಶುಗರ್ಸ್ ಲಿ., ಹವಳಗ | 13,50,279 | 69,640 |
| | ಎನ್‌ಎಸ್‌ಎಲ್ ಶುಗರ್ಸ್ ಲಿ., (ಆಳಂದ ಸಸಕಾ ಗುತ್ತಿಗೆದಾರರು), ಭೂಸನೂರು | 8,95,193 | 87,495 |
| | ಉಗಾರ್ ಶುಗರ್ ವರ್ಕ್ಸ್ ಲಿ., ಜೇವರ್ಗಿ. | 5,29,218 | 57,461 |

Scanned with CamScanner

| | | | |
|---|---|---|---|
| | ಒಟ್ಟು(3) | 27,74,690 | 2,14,596 |
| ಯಾದಗಿರಿ | ಕೋರಗ್ರೀನ್ ಶುಗರ್ಸ್ ಅಂಡ್ ಫ್ಯೂಯಲ್ಸ್ ಪ್ರೈ.ಲಿ., ಶಹಪುರ | 6,44,276 | 58,231 |
| | ಒಟ್ಟು(4) | 6,44,276 | 58,231 |
| | ಒಟ್ಟು ನಿವ್ವಳ (1+2+3+4) | 67,70,038 | 5,43,036 |

**(ಆ) ಸದರಿ ಸಕ್ಕರೆ ಕಾರ್ಖಾನೆಗಳಲ್ಲಿ ಯಾವ ಯಾವ ಕಾರ್ಖಾನೆಗಳಲ್ಲಿ ಎಥನಾಲ್ ಘಟಕಗಳನ್ನು ಸ್ಥಾಪಿಸಲಾಗಿದೆ; ಎಥನಾಲ್ ಘಟಕ ಸ್ಥಾಪಿಸದಿರುವ ಕಾರ್ಖಾನೆಗಳು ಯಾವುವು;**

ಕಲ್ಯಾಣ ಕರ್ನಾಟಕ ಭಾಗದಲ್ಲಿ ಎಥನಾಲ್ ಘಟಕಗಳನ್ನು ಸ್ಥಾಪಿಸಿರುವ ಮತ್ತು ಎಥನಾಲ್ ಘಟಕ ಸ್ಥಾಪಿಸದಿರುವ ಸಕ್ಕರೆ ಕಾರ್ಖಾನೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕಾರ್ಖಾನೆಯ ಹೆಸರು | ಎಥನಾಲ್ ಉತ್ಪಾದನಾ ಸಾಮರ್ಥ್ಯ (ಕೆ.ಎಲ್.ಪಿ.ಡಿ.ಗಳಲ್ಲಿ) |
|---|---|
| ಎಥನಾಲ್ ಘಟಕ ಸ್ಥಾಪಿಸಿರುವ ಸಕ್ಕರೆ ಕಾರ್ಖಾನೆಗಳು | |
| ಶಾಮನೂರು ಶುಗರ್ಸ್ ಲಿ., ದುಗ್ಗಾವತಿ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ | 60 |
| ಭಾಲ್ಕೇಶ್ವರ ಶುಗರ್ಸ್ ಲಿ., ಬಾಜೋಳಗ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ | 120 |
| ಬೀದರ್ ಕಿಸಾನ್ ಶಕ್ಕರ್ ಕಾರ್ಖಾನಾ, ಮೊಗದಾಳ್, ಬೀದರ್ ಜಿಲ್ಲೆ | 60 |
| ರೇಣುಕಾ ಶುಗರ್ಸ್ ಲಿ., ಹವಳಗ, ಅಫ್‌ಜಲ್‌ಪುರ ತಾಲ್ಲೂಕು, ಕಲಬುರಗಿ ಜಿಲ್ಲೆ | 300 |
| ಕೋರ್‌ಗ್ರೀನ್ ಶುಗರ್ಸ್ ಅಂಡ್ ಫ್ಯೂಯಲ್ಸ್ ಪ್ರೈ. ಲಿ., ತುಮಕೂರು, ಶಹಾಪುರ ತಾಲ್ಲೂಕು, ಯಾದಗಿರಿ ಜಿಲ್ಲೆ | 60 |
| ಒಟ್ಟು ಉತ್ಪಾದನಾ ಸಾಮರ್ಥ್ಯ | 600 |
| **ಎಥನಾಲ್ ಘಟಕ ಸ್ಥಾಪಿಸದಿರುವ ಸಕ್ಕರೆ ಕಾರ್ಖಾನೆಗಳು** | |
| ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಭಾಲ್ಕಿ, ಬೀದರ್ ಜಿಲ್ಲೆ | - |
| ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇಮಾಂಪುರ, ಬೀದರ್ ಜಿಲ್ಲೆ | - |
| ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಳ್ಳಿಖೇಡ್, ಬೀದರ್ ಜಿಲ್ಲೆ | - |
| ಶ್ರೀ ಭವಾನಿ ಶುಗರ್ಸ್, ಬರೂರು, ಬೀದರ್ ಜಿಲ್ಲೆ | - |
| ಮೈಲಾರ ಶುಗರ್ಸ್ ಲಿ., ಬೀರಬ್ಬಿ, ಹೂವಿನಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ | - |
| ಎನ್‌ಎಸ್‌ಎಲ್ ಶುಗರ್ಸ್ ಲಿ., (ತುಂಗಭದ್ರ), ದೇಶನೂರು, ಶಿರಗುಪ್ಪ ತಾಲ್ಲೂಕು, ಬಳ್ಳಾರಿ ಜಿಲ್ಲೆ. | - |
| ಎನ್‌ಎಸ್‌ಎಲ್ ಶುಗರ್ಸ್ ಲಿ. (ಆಳಂದ ಸಸಕಾ ಗುತ್ತಿಗೆದಾರರು), ಭೂಸನೂರು, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ. | - |
| ಉಗಾರ್ ಶುಗರ್ಸ್ ಲಿ., ಜೇವರ್ಗಿ, ಕಲಬುರಗಿ ಜಿಲ್ಲೆ | - |

Scanned with CamScanner

<table>
<tr>
<td>(ಇ)</td>
<td>ಒಂದು ಲೀಟರ್ ಎಥನಾಲ್ ದರ ಎಷ್ಟು; ಅದನ್ನು ಯಾವ ಪ್ರಮಾಣದಲ್ಲಿ ಡೀಸೆಲ್ ನಲ್ಲಿ ಮಿಶ್ರಣ ಮಾಡಲಾಗುತ್ತದೆ; ಕಬ್ಬಿನಿಂದ ಉತ್ಪತ್ತಿಯಾಗುವ ಇತರೆ ಉಪ ಉತ್ಪನ್ನಗಳು ಯಾವುವು; ಇವುಗಳಿಂದ ಕಾರ್ಖಾನೆಗಳು ಲಾಭಗಳಿಸಿ ಅದರ ಲಾಭಾಂಶವನ್ನು ರೈತರಿಗೆ ನೀಡದೇ ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು (ಮಾಹಿತಿ ನೀಡುವುದು)</td>
<td>ವಿವಿಧ ಮೂಲಗಳಿಂದ ಉತ್ಪಾದಿಸುವ ಎಥನಾಲ್‌ಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.
<table>
<tr><td>ಕ್ರ. ಸಂ.</td><td>ವಿವರ</td><td>ಪ್ರತಿ ಲೀ. ಒಂದಕ್ಕೆ ನಿಗದಿಪಡಿಸಿರುವ ಮೊತ್ತ (ರೂ.ಗಳಲ್ಲಿ)</td></tr>
<tr><td>1</td><td>ಕಬ್ಬಿನ ರಸದಿಂದ</td><td>63.45</td></tr>
<tr><td>2</td><td>ಬಿ.-ಹೆವಿ ಮೊಲಾಸಿಸ್‌ನಿಂದ</td><td>59.08</td></tr>
<tr><td>3</td><td>ಸಿ-ಹೆವಿ ಮೊಲಾಸಿಸ್‌ನಿಂದ</td><td>46.66</td></tr>
<tr><td>4</td><td>ಎಫ್.ಸಿ.ಐ ಅಕ್ಕಿಯಿಂದ (ರೂ.20/-ಪ್ರತಿ ಕೆ.ಜಿ. ಅಕ್ಕಿಗೆ)</td><td>56.87</td></tr>
<tr><td>5</td><td>ಹಾನಿಯಾದ ಆಹಾರ ಧಾನ್ಯಗಳು ಮತ್ತು ಮೆಕ್ಕೆ ಜೋಳದಿಂದ</td><td>51.55</td></tr>
</table>
ಕೇಂದ್ರ ಸರ್ಕಾರವು ಪ್ರಕಟಿಸಿರುವ ಎಥನಾಲ್ ನೀತಿಯಂತೆ, 2022ರ ಅವಧಿಯ ಒಳಗೆ ಶೇ.10ರಷ್ಟು ಹಾಗೂ 2025ರ ಅವಧಿಯ ಒಳಗೆ ಶೇ.20 ರಷ್ಟು ಎಥನಾಲ್‌ನ್ನು ಪೆಟ್ರೋಲ್ ನೊಂದಿಗೆ ಮಿಶ್ರಣ ಮಾಡುವ ಗುರಿ ನಿಗದಿಗೊಳಿಸಲಾಗಿದೆ.<br><br>
ಕಬ್ಬಿನ ಸಿಪ್ಪೆ, ಕಾಕಂಬಿ ಮತ್ತು ಪ್ರೆಸ್‌ಮಡ್‌ಗಳು ಕಬ್ಬಿನಿಂದ ಉತ್ಪತ್ತಿಯಾಗುವ ಪ್ರಾಥಮಿಕ ಉಪ ಉತ್ಪನ್ನಗಳಾಗಿದ್ದು, ಸಹ-ವಿದ್ಯುತ್, ರೆಕ್ಟಿಫೈಡ್ ಸ್ಪಿರಿಟ್ ಮತ್ತು ಎಥನಾಲ್‌ಗಳು ಮಾಧ್ಯಮಿಕ ಉತ್ಪನ್ನಗಳಾಗಿರುತ್ತವೆ.<br><br>
ಕಬ್ಬು ಸರಬರಾಜು ಮಾಡಿದ ರೈತರಿಗೆ ಕಬ್ಬು ಬಿಲ್ಲು ಪಾವತಿಯನ್ನು ಎರಡು ಹಂತಗಳಲ್ಲಿ ಮಾಡಲಾಗುತ್ತದೆ. ಮೊದಲ ಹಂತದಲ್ಲಿ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ. ದರದಂತೆ ಕಬ್ಬಿನ ಬಿಲ್ಲನ್ನು ಪಾವತಿಸಲಾಗುತ್ತದೆ ಮತ್ತು ಎರಡನೇ ಹಂತದಲ್ಲಿ ಸಕ್ಕರೆ ಮತ್ತು ಅದರ ಉಪ ಉತ್ಪನ್ನಗಳಿಂದ ಬರುವ ಆದಾಯವನ್ನು ಪರಿಗಣಿಸಿ, ಆದಾಯ ಹಂಚಿಕೆ ಸೂತ್ರದ ಪ್ರಕಾರ ಹೆಚ್ಚುವರಿ ಕಬ್ಬಿನ ಬೆಲೆಯನ್ನು ಪಾವತಿಸಲಾಗುತ್ತಿದ್ದು, ಕಾರ್ಖಾನೆಗಳಿಂದ ರೈತರಿಗೆ ವಂಚನೆಯಾಗದಂತೆ ಸರ್ಕಾರವು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತದೆ.</td>
</tr>
<tr>
<td>(ಈ)</td>
<td>ಪ್ರತಿ ಟನ್ ಕಬ್ಬಿಗೆ ಸರ್ಕಾರ ನಿಗಧಿಪಡಿಸಿದ ದರ ಎಷ್ಟು ಮತ್ತು ಈ ದರದಂತೆ ಎಲ್ಲಾ ಕಾರ್ಖಾನೆಗಳು ರೈತರಿಗೆ ನೀಡುತ್ತಿವೆಯೇ; ಇಲ್ಲದಿದ್ದಲ್ಲಿ ಅಂತಹ ಕಾರ್ಖಾನೆಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು)</td>
<td>ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ನವದೆಹಲಿ ಇವರ ಪತ್ರ ಸಂ: 3(4)/2020-ಎಸ್‌ಪಿ1 ದಿನಾಂಕ:31.08.2021 ರಂತೆ 2021-22ನೇ ಸಕ್ಕರೆ ಹಂಗಾಮಿಗೆ ಈ ಕೆಳಗಿನಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ನಿಗದಿಗೊಳಿಸಿರುತ್ತದೆ.<br><br>
1. ಶೇಕಡ 10.00 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ರೂ.2900/-<br>
2. ಶೇಕಡ 10.00 ಕ್ಕೆ ಮೇಲ್ಪಟ್ಟು ಇಳುವರಿಗೆ, ನಂತರದ ಶೇಕಡ 1 ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.290/- ರಂತೆ ಹೆಚ್ಚುವರಿ ಬೆಲೆ.<br>
3. ಶೇಕಡ 10.00 ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕೆ ಮೇಲ್ಪಟ್ಟು ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಶೇಕಡ 1 ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.290/-ರ ಸರಾಸರಿಯಂತೆ ಬೆಲೆಯನ್ನು ಕಡಿಮೆ ಮಾಡುವುದು.<br>
4. ಶೇಕಡ 9.5 ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.2755/- ಗಳ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ನಿಗದಿಗೊಳಿಸಲಾಗುವುದು.</td>
</tr>
</table>

Scanned with CamScanner

2020-21ನೇ ಸಾಲಿನಲ್ಲಿ ರಾಜ್ಯದಲ್ಲಿ ಕಾರ್ಯನಿರ್ವಹಿಸಿರುವ ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯಂತೆ 2021-22ನೇ ಕಬ್ಬು ನುರಿಸುವ ಹಂಗಾಮಿಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ-2014ರ ಕಲಂ 9(1) ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ಕಾರ್ಖಾನೆವಾರು ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಸಕ್ಕರೆ ನಿರ್ದೇಶನಾಲಯದ ಆದೇಶ ದಿನಾಂಕ:29.10.2021 ರಂತೆ ಪ್ರಕಟಿಸಲಾಗಿದೆ. ಈ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್ ದರವಾಗಿರುತ್ತದೆ.

2021-22ನೇ ಕಬ್ಬು ಅರೆಯುವ ಹಂಗಾಮಿನಲ್ಲಿ 72 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸಿದ್ದು, ಈ ಕಾರ್ಖಾನೆಗಳು ದಿನಾಂಕ:31.08.2022ರ ಅಂತ್ಯಕ್ಕೆ ಇದ್ದಂತೆ 622.26 ಲಕ್ಷ ಮೆ. ಟನ್ ಕಬ್ಬನ್ನು ಅರೆದು, 59.78 ಲಕ್ಷ ಮೆ. ಟನ್ ಸಕ್ಕರೆ ಉತ್ಪಾದಿಸಿ, ಶೇಕಡ 9.61 ರಷ್ಟು ಸಕ್ಕರೆ ಇಳುವರಿ ಪಡೆದಿರುತ್ತವೆ.

2021-22 ನೇ ಹಂಗಾಮಿನಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ದಿನಾಂಕ 31.08.2022ರ ಅಂತ್ಯಕ್ಕೆ ಇದ್ದಂತೆ ಪಾವತಿಸಬೇಕಾದ ಕಬ್ಬು ಬಿಲ್ಲು ಮೊತ್ತ ರೂ.19,634.84 ಕೋಟಿಗಳಾಗಿದ್ದು, ಈ ಪೈಕಿ ರೂ.19,872.70 ಕೋಟಿಗಳನ್ನು ಪಾವತಿಸಿರುತ್ತವೆ. ಕೆಲವೊಂದು ಕಾರ್ಖಾನೆಗಳು ಎಫ್.ಆರ್.ಪಿ. ದರಕ್ಕೂ ಮೇಲ್ಪಟ್ಟು ಕಬ್ಬಿನ ಬಿಲ್ಲನ್ನು ಪಾವತಿಸಿರುತ್ತವೆ. ಒಟ್ಟಾರೆ ಪಾವತಿ ಪ್ರಮಾಣವು ಶೇ.99 ರಷ್ಟು ಆಗಿರುತ್ತದೆ. ಬಾಕಿ ಉಳಿಸಿಕೊಂಡಿರುವ ಕಾರ್ಖಾನೆಗಳ ವಿವರ ಈ ಕೆಳಕಂಡಂತಿದೆ.

| ಕಾರ್ಖಾನೆಯ ಹೆಸರು | ಕಬ್ಬು ಬಿಲ್ಲು ಬಾಕಿ (ರೂ. ಕೋಟಿಗಳಲ್ಲಿ) |
|---|---|
| 1. ಬೀದರ್ ಸಹಕಾರಿ ಸಕ್ಕರೆ ಕಾಖಾನೆ ನಿ., ಹಳ್ಳಿಖೇಡ್, ಬೀದರ್ ಜಿಲ್ಲೆ | 9.62 |
| 2. ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ.ಹುಬ್ಬಳ್ಳಿ, ಬೆಳಗಾವಿ ಜಿಲ್ಲೆ | 6.06 |
| 3. ಶ್ರೀ ಬಸವೇಶ್ವರ ಶುಗರ್ಸ್ ಲಿ., ಕಾರಜೋಳ | 10.00 |
| 4. ಜಮಖಂಡಿ ಶುರಗರ್ಸ್ ಲಿ., ಹಿರೇಪಡಸಲಗಿ | 1.77 |
| ಒಟ್ಟು | 27.45 |

ಕಬ್ಬು ಬಿಲ್ಲು ವಸೂಲಾತಿ ಸಂಬಂಧ ಬಾಕಿ ಉಳಿಸಿಕೊಂಡಿರುವ ಕಾರ್ಖಾನೆಗಳಿಗೆ ದಿನಾಂಕ:14.01.2022 ಮತ್ತು 20.04.2022 ರಂದು ಶಾಸನಬದ್ಧ ನೋಟೀಸ್‌ಗಳನ್ನು ಜಾರಿಗೊಳಿಸಲಾಗಿದೆ. ಆದಾಗ್ಯೂ ಕಬ್ಬು ಬಿಲ್ಲು ಬಾಕಿಯನ್ನು ಪಾವತಿಸದಿದ್ದಲ್ಲಿ, ಕಬ್ಬು (ನಿಯಂತ್ರಣ) ಆದೇಶ-1966 ಕಲಂ-3(8) ರನ್ವಯ ಬಾಕಿ ಉಳಿಸಿಕೊಂಡಿರುವ ಮೊತ್ತವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಅವಕಾಶಗಳ ರೀತ್ಯಾ ಶೇ.15ರ ಬಡ್ಡಿಯೊಂದಿಗೆ ವಸೂಲಿ ಮಾಡಲು ಅವಕಾಶವಿರುತ್ತದೆ.

(ಉ) ಇತ್ತೀಚೆಗೆ ಕೇಂದ್ರ ಸರ್ಕಾರ ಪ್ರತಿ ಕ್ವಿಂಟಾಲ್ ಕಬ್ಬಿಗೆ 15-00 ರೂಪಾಯಿಗಳ ಸಹಾಯಧನ ಘೋಷಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಈ

ಇಲ್ಲಾ.

ಆದರೆ, ಕೇಂದ್ರ ಸರ್ಕಾರವು ಪತ್ರ ಸಂಖ್ಯೆ 3(1)/2021-ಎಸ್‌ಪಿ-1 ದಿನಾಂಕ:17.08.2022 ರಂತೆ 2022-23ನೇ ಸಕ್ಕರೆ ಹಂಗಾಮಿಗೆ ಈ ಕೆಳಗಿನಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ನಿಗದಿಪಡಿಸಿದೆ.

1. ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ರೂ.3050/-
2. ಶೇಕಡ 10.25 ಕ್ಕೆ ಮೇಲ್ಪಟ್ಟು ಇಳುವರಿಗೆ ನಂತರದ ಶೇಕಡ 1ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.305/- ರಂತೆ ಹೆಚ್ಚುವರಿ ಬೆಲೆ.
3. ಶೇಕಡ 10.25 ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕೆ ಮೇಲ್ಪಟ್ಟ ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಶೇಕಡ 1 ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್

Scanned with CamScanner

| | | |
|---|---|---|
| | ಸಹಾಯಧನಕ್ಕೆ ರಾಜ್ಯ ಸರ್ಕಾರವೂ ತನ್ನ ಪಾಲಿನ ಸಹಾಯಧನ ಸೇರಿಸಿ ರೈತರಿಗೆ ನೀಡುವ ಯೋಚನೆ ಸರ್ಕಾರದ ಮುಂದಿದೆಯೇ, ಇದ್ದಲ್ಲಿ, ಆ ಸಹಾಯಧನದ ಮೊತ್ತ ಎಷ್ಟು; (ಮಾಹಿತಿ ನೀಡುವುದು) | ಟನ್‌ಗೆ ರೂ.305/-ರ ಸರಾಸರಿಯಂತೆ ಬೆಲೆಯನ್ನು ಕಡಿಮೆ ಮಾಡುವುದು<br>4. ಶೇಕಡ 9.5 ಅಥವಾ 9.5 ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.2821.25 ಗಳ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ನಿಗದಿಗೊಳಿಸಿರುತ್ತದೆ.<br><br>ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ. ದರದಂತೆ, ರಾಜ್ಯದ ಸಕ್ಕರೆ ಕಾರ್ಖಾನೆಗಳು 2021-22ನೇ ಸಾಲಿನಲ್ಲಿ ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯನ್ನು ಆಧರಿಸಿ, 2022-23ನೇ ಕಬ್ಬು ನುರಿಸುವ ಹಂಗಾಮಿಗೆ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ-2014ರ ಕಲಂ 9(1) ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ಕಾರ್ಖಾನೆವಾರು ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ನಿಗದಿಗೊಳಿಸಿ ಆದೇಶಿಸಲಾಗುವುದು.<br>ಕೇಂದ್ರ ಸರ್ಕಾರದ ಎಫ್.ಆರ್.ಪಿ. ದರಕ್ಕೆ ಪೂರಕವಾಗಿ ಸಹಾಯಧನ ಸೇರಿಸಿ ರೈತರಿಗೆ ನೀಡುವ ಪ್ರಸ್ತಾವನೆಯು ಪ್ರಸ್ತುತ ರಾಜ್ಯ ಸರ್ಕಾರದ ಮುಂದೆ ಇರುವುದಿಲ್ಲ. |
| (ಊ) | ಸಕ್ಕರೆ ಕಾರ್ಖಾನೆಗಳು ಕಬ್ಬಿನ ಉಪ ಉತ್ಪನ್ನಗಳಿಂದ ತಯಾರಿಸುವ ವಿದ್ಯುತ್, ಇಥೆನಾಲ್ ಇತ್ಯಾದಿಗಳಿಂದ ಗಳಿಸುವ ಲಾಭಾಂಶವನ್ನು ರೈತರಿಗೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ? (ಮಾಹಿತಿ ನೀಡುವುದು) | ಕರ್ನಾಟಕ ಕಬ್ಬು (ಕಬ್ಬು ಖರೀದಿ ಮತ್ತು ಸರಬರಾಜು) ಅಧಿನಿಯಮ 2013 ಹಾಗೂ (ತಿದ್ದುಪಡಿ) ಅಧಿನಿಯಮ 2014 ರ ಕಂಡಿಕೆ 4(ಡಿ) ಪ್ರಕಾರ ಸಕ್ಕರೆ ಮತ್ತು ಇತರ ಪ್ರಾಥಮಿಕ ಉಪ ಉತ್ಪನ್ನಗಳಾದ ಕಬ್ಬಿನ ಸಿಪ್ಪೆ, ಕಾಕಂಬಿ ಮತ್ತು ಪ್ರೆಸ್ ಮಡ್‌ಗಳ ಮಾರಾಟದಿಂದ ಬರುವ ಆದಾಯವನ್ನು ವಿಶ್ಲೇಷಣೆ ಮಾಡಿ, ಆದಾಯ ಹಂಚಿಕೆ ಸೂತ್ರದ ಮೇರೆಗೆ ಹೆಚ್ಚುವರಿ ಕಬ್ಬಿನ ದರವನ್ನು ಪಾವತಿಸಲು ಅವಕಾಶ ಇರುತ್ತದೆ. ಆದರೆ, ಮಾಧ್ಯಮಿಕ ಉತ್ಪನ್ನಗಳಾದ ಸಹ-ವಿದ್ಯುತ್, ಎಥನಾಲ್ ಇತ್ಯಾದಿಗಳಿಂದ ಗಳಿಸುವ ಲಾಭಾಂಶವನ್ನು ರೈತರಿಗೆ ಹಂಚಿಕೆ ಮಾಡುವ ಬಗ್ಗೆ ನಿಯಮಗಳಲ್ಲಿ ಅವಕಾಶವನ್ನು ಕಲ್ಪಿಸಿರುವುದಿಲ್ಲ. |

ಸಂಖ್ಯೆ: ಸಿಐ 156 ಎಸ್‌ಜಿಎಫ್ 2022

(ಶಂಕರ.ಬಿ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

Scanned with CamScanner